'ದೋಷ ಕೊಡೋಕೆ ಸರ್ಪ ಯಾಕೆ ಬರಬೇಕು ಹೇಳು? ನಾವು ಮಾಡೋ ಕೆಲಸ, ಯೋಚನೆಗಳೇ ದೋಷಪೂರಿತ ಆಗಿರುವಾಗ ಸರ್ಪದ ಮೇಲೆ ಯಾಕೆ ಈ ಅಪವಾದ! ಇದೂ ಕೂಡ ಮನುಷ್ಯನ ಸ್ವಾರ್ಥ ಅಲ್ಲವೇ?' ಅಂದಿದ್ದಳು.

ಅವಳೊಂದಿಗೆ ಮಾತನಾಡುವುದು, ಪುಸ್ತಕ ಓದುವುದು ಎಲ್ಲ ಮಾಡುವಾಗ ಅಮ್ಮನಿಗೆ ತುಂಬಾ ಸಿಟ್ಟು ಬರುತ್ತಿತ್ತು. 'ಈಗೇನು ದೇಶ ಆಳಬೇಕಾ. ನೆಮ್ಮದಿಯಾಗಿ ಗಂಡನ ಮನೇಲಿ ಸಂಸಾರ ಮಾಡೋಕೆ ಬೇಕಾಗಿರೋದನ್ನ ಕಲಿತರೆ ಸಾಕು' ಎಂದು ಅತ್ತಿಗೆಗೆ ಚುಚ್ಚುತ್ತಿದ್ದಳು. ಅತ್ತಿಗೆ ಹೇಳುತ್ತಿದ್ದಳು, 'ಲೀಲ ನೀವು ಹೇಳಿದಂತೆಯೇ ಇದ್ದರೆ ನಾಲ್ಕು ದಿನದಲ್ಲಿ ಅವಳ ಗಂಡ ಅವಳನ್ನು ಮನೆಗೆ ವಾಪಸ್ ಕರೆದುಕೊಂಡು ಬಂದು ಬಿಟ್ಟು ಬಿಡುತ್ತಾನೆ ಅಥವಾ ಅವಳನ್ನ ಯಾರಾದರೂ ಅವಿದ್ಯಾವಂತನಿಗೇ ಕೊಡುವುದು ಉತ್ತಮ' ಅಂತ.

ಈಗ ಅನ್ನಿಸುತ್ತೆ, ನಾನು ಅತ್ತಿಗೆಯ ಜೊತೆಯಲ್ಲಿ ಬೆಳೆಯದೇ ಇದ್ದಿದ್ದರೆ ಖಂಡಿತವಾಗಿ ಇವರ ಜೊತೆಯಲ್ಲಿ ಬಾಳುವುದು ಆಗುತ್ತಿರಲಿಲ್ಲ. ಆಗ ನಮ್ಮ ಪುಟ್ಟಿಯ ಬದುಕಿನ ಗತಿ!!

ಒಂದು ದಿನ ಯುಗಾದಿ ಹಬ್ಬ. ಹೋಳಿಗೆ ಮಾಡಿಟ್ಟಿದ್ದರು ಶೇಷಜ್ಜಿ. ಒಂದು ಬೀದಿ ನಾಯಿ ಬಾಲ ಅಲ್ಲಾಡಿಸುತ್ತಾ ಕುಂಯ್ ಕುಂಯ್ ಎಂದು ಗೇಟಿನ ಬಳಿಗೆ ಬಂದಿತ್ತು. 'ಅಜ್ಜಿ ಈ ಹೋಳಿಗೆ ಆ ನಾಯಿಗೆ ಹಾಕಲಾ?' ಅಂತ ಕೇಳಿದ್ದೆ. 'ಅದಕ್ಕೇನು ಹಾಕು. ಅದೂ ಒಂದು ಜೀವಾನೇ ಅಲ್ವೇ?' ಎಂದು ಅಜ್ಜಿ ಒಂದು ಚೂರು ಹೋಳಿಗೆ ಕೊಟ್ಟಿದ್ದಳು. ಆಗ ಪ್ರಾರಂಭ ಆಗಿಬಿಟ್ಟಿತು ಅಮ್ಮನ ಹಿಡಿಂಬಾವತಾರ– 'ದೇವರಿಗೆ ನೈವೇದ್ಯ ಮಾಡುವ ಮೊದಲೇ ನಾಯಿಗೆ ಹಾಕಿದ್ರಾ? ನಮ್ಮ ಮನೇ ಹಾಳು ಮಾಡೋಕೇ ಅಂತನೇ ಈ ಮುದುಕಿ ಇಲ್ಲಿ ಕುಳಿತಿದ್ದಾಳೆ. ಅವಳನ್ನ ಕರಕೊಂಡು ಬಂದ ಇವರ ಬುದ್ಧಿಗೆ ಏನು ಹೇಳಬೇಕೋ. ಮನೆ ಸೊಸೆಯ ಲಕ್ಷಣವಾದರೂ ಏನಿದೆ ಅವಳಲ್ಲಿ...' ಎಂದೆಲ್ಲ ಪ್ರಾರಂಭವಾಗಿ ಅದು ಅತ್ತಿಗೆಯ ಕಾಲ್ಗುಣ, ಅವಳ ವಂಶಾವಳೀ ಎಲ್ಲವನ್ನೂ ಸೇರಿಸಿ ರಾದ್ಧಾಂತ ಮಾಡಿಬಿಟ್ಟಳು. ಹಬ್ಬ ಹೋಗಿ ಏನೇನೋ ಆಗಿಬಿಟ್ಟಿತು. ಅಣ್ಣ ಕೂಡ ಅತ್ತಿಗೆಗೇ ಅಂದಿದ್ದ 'ನೀವುಗಳು ಸ್ವಲ್ಪ ನೋಡಿಕೊಂಡು ಕೆಲಸ ಮಾಡೋದನ್ನ ಕಲೀಬೇಕು. ಇಲ್ಲದ ಉಸಾಬರಿ ಯಾಕೆ ನಿಮ್ಮಗಳಿಗೆ' ಅಂತ. ಅಂದಿದ್ದು ಅತ್ತಿಗೆಗೇ ಆದರೂ ಅದು ತಾಕಿದ್ದು ಶೇಷಜ್ಜಿಗೆ. ಅವತ್ತು ಅತ್ತಿಗೆ ಕೂಡ ಅಣ್ಣನ ಜೊತೆ ವಾದಕ್ಕಿಳಿದಿದ್ದಳು– 'ನನಗೆ ಏನು ಬೇಕಾದರೂ ಅನ್ನಿ. ಆದರೆ ಶೇಷಜ್ಜಿಗೆ ಮಾತ್ರ ಏನಾದರೂ ಅಂದರೆ ನಾನು ಸುಮ್ಮನಿರೋಲ್ಲ. ಅವರನ್ನ ಏನಂತ ತಿಳಿದುಕೊಂಡಿದ್ದೀರಿ. ನನ್ನ ತಾಯಿ ಸಮಾನ ಅವರು. ಅವರನ್ನ ಅಡುಗೆಯವರ ತರಹ, ಮನೆ ಕೆಲಸದವರ ತರಹ ಟ್ರೀಟ್ ಮಾಡ್ತ ಇದ್ದೀರ. ಅವರೂ ಸುಮ್ಮನಿದ್ದಾರೆ ಅದು ಅವರ ದೊಡ್ಡತನ. ಅಷ್ಟೆ. ಮೊದಲು ನಿಮ್ಮ ನಿಮ್ಮ ಲಕ್ಷಣಗಳನ್ನ ಸುಧಾರಿಸಿಕೊಳ್ಳಿ. ಹೋಳಿಗೆ ತಿಂದಿದ್ದು ನಾಯಿನೇ. ಆದ್ರೆ ಅದೇ ನಾಯಿ ಎಂಜಲು ತಿನುವಾಗ ಮಾತ್ರ ಶ್ರೀನಿವಾಸ ಆಗಿಬಿಡುತ್ತೆ!! ಪ್ರಸಾದ ತಿನ್ನುವಾಗ ಮಾತ್ರ ನಾಯಿನಾ!! ತುಂಬಾ ಚೆನ್ನಾಗಿದೆ ನಿಮ್ಮಗಳ ತರ್ಕ...' ಅಣ್ಣ ಮೌನವಾಗಿ ಕೋಣೆಗೆ ಹೋಗಿದ್ದ. ಅಮ್ಮ ಮುಖ ಊದಿಸಿಕೊಂಡು ತುಳಸೀ ಕಟ್ಟೇ ಮುಂದೆ ಕುಳಿತುಬಿಟ್ಟಳು. ನನಗೂ ಅತ್ತಿಗೆಯ ಮಾತು ಸರಿ ಅನ್ನಿಸಿದ್ದು ಹೌದು. ನಾನು ಹೋಳಿಗೆ ಕೇಳಿ ತಪ್ಪು ಮಾಡಿದೆ ಅನ್ನಿಸಿತು. ಆದರೆ ಅಮ್ಮ ಇಷ್ಟೆಲ್ಲ ಮಾತುಗಳನ್ನು ಆಡುವ ಅವಶ್ಯಕತೆ ಏನಿತ್ತು ಅದು ಸರಿ ಇಲ್ಲ ಎಂದೆನ್ನಿಸಿ ಮನಸ್ಸೆಲ್ಲ ಪೆಚ್ಚಾಗಿಬಿಟ್ಟಿತು. ಶೇಷಜ್ಜಿ ಬಳಿ ಹೋಗಿ ಕುಳಿತಾಗ ಅವರು ಹೇಳಿದರು, 'ಜೀವನ ಅಂದರೆ ಇದೇ ಕಣೋ ಪುಟ್ಟ. ತಿಳಕೊ. ಇದನ್ನ ತಿಳೀದೇ ಹೋದರೆ ನಾವು ಬಾಳೋಕೆ ಆಗೋದೇ ಇಲ್ಲ' ಅಂದು 'ಬಾ' ಎಂದು ತನ್ನ ಕೋಣೆಗೆ